ಸಾಕ್ಷಿ ಯನ್ನು ದಿಃ 06.02.2026 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ  ವಾದಿ ಪರ ವಕೀಲರಿಂದಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. 5 ಪೋಟೋಗಳನ್ನು ನಿಪಿ - 22 ರಿಂದ 26 ಎಂದು ಹಾಗೂ ಒಂದು ಸಿ.ಡಿಯನ್ನು ನಿಪಿ -27 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)                ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,  ಪಿರಿಯಾಪಟ್ಟಣ

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ

1. ನಿಪಿ - 21 ನ್ನು ಈಗ 15 ದಿನಗಳ ಹಿಂದೆ ಪಡೆಯಲಾಗಿದೆ. ಅದನ್ನು ಪಡೆಯಲು ಅರ್ಜಿ ನೀಡಿದವರು ಯಾರು ಎಂದರೆ, ಸಾಕ್ಷಿ ಉತ್ತರ ನೀಡಿರುವುದಿಲ್ಲ. ಸದರಿ ಅರ್ಜಿ ಯಾವ ದಿನಾಂಕಂದು ನೀಡಿದ್ದೀರಿ ಎಂದರೆ, ಒಂದು ವಾರದ ಹಿಂದೆ ಪಡೆದಿದ್ದೇವೆ. ಸದರಿ ಅರ್ಜಿ ನೀಡುವಾಗ ಯಾವ ದಾಖಲೆ ಕೊಟ್ಟಿದ್ದೀರಿ ಎಂದರೆ, ಯಾವ ದಾಖಲೆ ಕೊಟ್ಟಿಲ್ಲ.
2. ನಿಪಿ - 21 ರಲ್ಲಿ ಏನು ಇದೆ ಎಂದು ನಾನು ತಿಳಿದುಕೊಂಡಿಲ್ಲ.
3. ನಿಪಿ - 22 ರಿಂದ 26 ರ ಫೋಟೋಗಳನ್ನು ನಿನ್ನೆ ದಿನ ತೆಗೆಸಲಾಗಿದೆ. ಅವನ್ನು ನಾನೇ ತೆಗೆದಿದ್ದೇನೆ. ಅವನ್ನು ಕೊಪ್ಪ ಸ್ಟುಡಿಯೋದಲ್ಲಿ ತೆಗೆಯಲಾಗಿದೆ, ಅಂಗಡಿ ಹೆಸರು ನನಗೆ ಗೊತ್ತಿಲ್ಲ. ಆ ಬಗ್ಗೆ ರಶೀದಿ ಇಲ್ಲ.
4. ನಿಪಿ -22 ರ ಫೋಟೋದಲ್ಲಿ ನಿಮ್ಮ ಹೆಸರಾಗಲಿ ಅಥವಾ ಮನೆಯ ನಂಬರ್ ಅಥವಾ ಊರಿನ ಹೆಸರು ಇರುವುದಿಲ್ಲ ಎಂದರೆ, ಇದೆ ಎಂದು ನುಡಿಯುತ್ತಾರೆ.
5. ಪ್ರತಿವಾದಿಗೆ ತೊಂದರೆಯಾಗಲಿ ಎಂದು ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
6. ನಿಮ್ಮ ವಾದ ಪತ್ರದ ಹಾಗೂ ಮುಖ್ಯವಿಚಾರಣೆಯ ಮೊದನೇ ಪ್ಯಾರಗಳಲ್ಲಿ ಹೇಳಿರುವ ವಿಚಾರಗಳಿಗೆ ಹಾಗೂ ನಿಪಿ - 21 ದಾಖಲೆಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ